ಸರಿ-ತಪ್ಪುಗಳ ಪ್ರಶ್ನೆಯಿಂದ ಪ್ರಯೋಜನವಿಲ್ಲ. ಆದರೆ ಜೀವನದ ಒಬ್ಬ ವಿದ್ಯಾರ್ಥಿ ಇವೆರಡರ ಎದುರು ತಳೆಯಬೇಕಾದ ನಿಲುವು ಯಾವುದು? ಅನ್ನೋದು ನನ್ನ ಪ್ರಶ್ನೆ. ಉಳ್ಳವರು ಮತ್ತು ಇಲ್ಲದವರ ನಡುವಿನ ಸಂಬಂಧ ಸ್ಥಗಿತವಾದದ್ದೆ? ಚಲನಶೀಲವಾದದ್ದೆ? ಹಾಗಾದರೆ ಸಾಹಿತ್ಯ ಯಾವುದನ್ನು ಕಾಣಿಸಬೇಕು? ಸಂಸ್ಕೃತಿನಿರ್ದಿಷ್ಟತೆಗೆ ಅಂಟಿಕೊಳ್ಳುವುದು ಎಂಥ ಪರಿಣಾಮಗಳಿಗೆ ಕಾರಣವಾಗಬಹುದು?

ಸಂಸ್ಕೃತಿನಿರ್ದಿಷ್ಟತೆಯು ಸಾಧ್ಯವೇ ಇಲ್ಲ, ಎಲ್ಲವನ್ನೂ ಸಾರ್ವತ್ರಿಕ ನೆಲೆಯಲ್ಲಿಯೇ ಗುರುತಿಸಬೇಕು ಎಂಬ ವಾದ ಕೂಡ ಅನೇಕ ತೊಂದರೆಗಳನ್ನು ಸೃಷ್ಟಿಸಬಹುದು. ಒಂದು ಕೃತಿಯನ್ನು ವಿಶ್ಲೇಷಿಸುವುದೆಂದರೆ – ಅದು ಕಲೆ, ಸಂಸ್ಕೃತಿ, ಸಾರ್ವತ್ರಿಕತೆ, ಸಮಕಾಲೀನತೆ ಇವೆಲ್ಲವನ್ನೂ ಒಳಗೊಂಡ ಕ್ರಿಯೆ. ಶೇಕ್ಸ್‌ಪಿಯರನ ನಾಟಕಗಳನ್ನು ಸಂಸ್ಕೃತಿ ನಿರ್ದಿಷ್ಟವಾಗಿ ಓದಬೇಕೆ? ಸಾರ್ವತ್ರಿಕ ನೆಲೆಯಲ್ಲಿ ಓದಬೇಕೆ? ಸಾಹಿತ್ಯ ಕೃತಿಯ ಜೀವಂತಿಕೆ ಎನ್ನುವಂಥದ್ದು ಕ್ಷಣಕ್ಷಣಕ್ಕೂ ಹುಟ್ಟಿಕೊಳ್ಳುವ ಒಂದು ಸಂಗತಿ. ಅದರ ವೈವಿಧ್ಯವನ್ನು ನಾವು ಮರೆಯಬಾರದು. ಅದನ್ನು ಸಂಸ್ಕೃತಿವಿಮರ್ಶೆಗೆ ಒಳಪಡಿಸಬೇಕು ಅನ್ನೋ ಹಟದಿಂದಾಗಿ ನಮ್ಮ ಓದನ್ನು ಒರಟಾಗಿಸುತ್ತೇವೆ. ಹಾಗೆಯೇ ಸಾರ್ವತ್ರಿಕತೆಯ ಅತಿರೇಕದಿಂದಲೂ ಓದನ್ನು ಒರಟಾಗಿಸುತ್ತೇವೆ. ಇವೆರಡನ್ನೂ ನೋಡುವ ಕ್ರಮಗಳ ಕುರಿತು ನಾನು ಯೋಚಿಸುತ್ತಿದ್ದೆ. ಇನ್ನಷ್ಟು ಖಚಿತವಾಗಿ ಹೇಳೋದಾದರೆ ಗೋಕಾಕರ ಸಾಹಿತ್ಯದಲ್ಲಿ ಕಂಡುಬರುವ 'ಸೋ ಕಾಲ್ಡ್' ಸಾರ್ವತ್ರಿಕತೆಗೂ, ಕುವೆಂಪು ಅವರ ಸಾಹಿತ್ಯದಲ್ಲಿ ಕಂಡುಬರುವ ಸಾರ್ವತ್ರಿಕತೆಗೂ ಇರುವ ವ್ಯತ್ಯಾಸ ಗಮನಿಸಿ. ಅವೆರಡರ ಹಣಿಗೆ ಒಂದು ಪ್ರಬುದ್ಧಮಾರ್ಗದಲ್ಲಿ ಚಲಿಸಿದಾಗ ಕುವೆಂಪು ಕಾದಂಬರಿ ಬರುತ್ತೆ, ಬೇಂದ್ರೆ ಕಾವ್ಯ ಬರುತ್ತೆ, ದೇವನೂರು ಕಥೆ ಬರುತ್ತೆ. ಕೆಲವೊಮ್ಮೆ ಶಿವರಾಮ ಕಾರಂತರ ಬರಹ ಕೂಡ ಬರುತ್ತೆ. ಈ ಒಂದು ಅಂತರ ಗೊತ್ತಾದಾಗ ಮಾತ್ರ ಸಂಸ್ಕೃತಿ ನಿರ್ದಿಷ್ಟತೆಗಳ ರಾಜಕಾರಣ ತಿಳಿಯುತ್ತೆ. ಕಲೆಗೆ ಆವರಿಸಿಕೊಳ್ಳುವ ವಕೀಲಿಯ ಬಣ್ಣಗಳು ಗೊತ್ತಾಗುತ್ತದೆ. ವಾದಮಂಡನೆಯೇ ಕಲೆಯನ್ನು ಆವರಿಸಿಕೊಳ್ಳುವ ದುರಂತವು ಗಮನಕ್ಕೆ ಬರುತ್ತೆ. ಅಸ್ಮಿತೆಯ ರಾಜಕಾರಣವು ಕಲೆಯನ್ನು ಬಹಳ ದೂರ ತೆಗೆದುಕೊಂಡು ಹೋಗಲಿಕ್ಕಿಲ್ಲ. ಆಗ ಒಂದು ಬಗೆಯ 'ತೆರೆದುಕೊಳ್ಳುವಿಕೆ' ಮಾಯವಾಗುತ್ತದೆ. ಕನ್ನಡ ಸಾಹಿತ್ಯದ ಬೇರೆಬೇರೆ ಹಂತಗಳಲ್ಲಿ ತೆರೆದ ಬಾಗಿಲುಗಳೆಷ್ಟು? ಮುಚ್ಚಿದ ಬಾಗಿಲುಗಳೆಷ್ಟು? ಲಿಂಗ, ವರ್ಣ, ವರ್ಗ, ಪ್ರಭುತ್ವ, ಸಾಹಿತ್ಯ ಸೃಷ್ಟಿಯ ವಿಧಾನಕ್ಕೆ ಸಂಬಂಧಿಸಿದ ಯಾವುದೇ ಬಗೆಯ ಅಸ್ಮಿತೆಯಾಗಿರಬಹುದು – ಅದು ಪ್ರಬುದ್ಧತೆಗೆ ಎರವಾದರೆ, ಸಂಕೀರ್ಣತೆಯನ್ನು ಕಳೆದುಕೊಂಡರೆ, ಗೋಡೆಗಳನ್ನು ಕಟ್ಟುತ್ತದೆ. ಬಹುಶಃ ಈ ಸಮಸ್ಯೆಯನ್ನು ಕುರಿತು ನಾನು ಮಾತಾಡ್ತಾ ಇದ್ದೆ ಅನಿಸುತ್ತೆ.

**◆ 'ಶತಮಾನದ ಸಾಹಿತ್ಯ ವಿಮರ್ಶೆ'ಯು ಕನ್ನಡದ ಮುಖ್ಯವಾದ ಪ್ರಾತಿನಿಧಿಕ ವಿಮರ್ಶೆಗಳ ಸಂಕಲನ. ಕನ್ನಡ ವಿಮರ್ಶೆಯನ್ನು ಹತ್ತಿರದಿಂದ ಓದಿ ವಿಶ್ಲೇಷಿಸಿದವರು ನೀವು. ಆದರೆ ಕನ್ನಡದ ಒಟ್ಟು ವಿಮರ್ಶಾ ಪರಂಪರೆಯ ಮೇಲೆ ನಿಮ್ಮದೊಂದು ಟಿಪ್ಪಣಿಯಿದೆ. ಅದೇನೆಂದರೆ 'ಕನ್ನಡ ವಿಮರ್ಶೆಯಲ್ಲಿ ಹೊಳಹುಗಳಿವೆ, ಒಳನೋಟಗಳಿವೆ, ಆದರೆ ಸ್ವತಂತ್ರವಾದ ಲೋಕದರ್ಶನ, ಕಲಾದರ್ಶನ ಇಲ್ಲ' ಅಂತ. ಇದನ್ನು ರೂಪಿಸಿಕೊಳ್ಳುವುದು ಕನ್ನಡ ವಿಮರ್ಶೆಗೆ ಯಾಕೆ ಸಾಧ್ಯವಾಗಲಿಲ್ಲ?**

ಇದು ಬಹಳ ಮುಖ್ಯವಾದ ಪ್ರಶ್ನೆ. ನಾವೆಲ್ಲರೂ ಆಲೋಚನೆ ಮಾಡಬೇಕಾದ ಸಂಗತಿ. ಇದು ಕೇವಲ ವಿಮರ್ಶೆಯ ತಾತ್ವಿಕತೆಗೆ ಸಂಬಂಧಪಟ್ಟ ಮಿತಿ ಹೇಗೊ ಹಾಗೆಯೇ ವಿಮರ್ಶೆಯ ವಿಧಾನಕ್ಕೆ ಸಂಬಂಧಪಟ್ಟ ಸಂಗತಿ ಕೂಡ ಹೌದು. ವಿಮರ್ಶೆಯು ಕೃತಿಯನ್ನು ಬೆಳಗಿಸುವ ಒಂದು ಕ್ರಿಯೆ ಎಂದು ಭಾವಿಸುವುದು ಸಹಜ. ಇಲ್ಲಿ ಕೃತಿಯ ದರ್ಶನವಾಗುತ್ತದೊ? ಕೃತಿಕಾರನ ದರ್ಶನವಾಗುತ್ತದೊ? ಅಥವಾ ವಿಮರ್ಶಕನ ಲೋಕದರ್ಶನವೊ? ವಿಮರ್ಶಕ ಇದನ್ನೆಲ್ಲ ಕಂಡುಕೊಳ್ಳಲು ಎಷ್ಟೋ ಸಲ ಬೇರೆ ಬೇರೆ ದಾರಿಗಳಲ್ಲಿ ಕ್ರಮಿಸಬೇಕಾಗುತ್ತದೆ. ಕೀರ್ತಿನಾಥ ಕುರ್ತಕೋಟಿ ಅವರ ಬರವಣಿಗೆಯ ಎರಡು ಹಂತಗಳನ್ನು ಗಮನಿಸಿ. ಅವರು ನಿವೃತ್ತರಾಗಿ ಧಾರವಾಡಕ್ಕೆ ಬಂದಮೇಲೆ 'ಪ್ರಜಾವಾಣಿ'ಯಲ್ಲಿ ಅಂಕಣಗಳನ್ನು ಬರೆಯುತ್ತಿದ್ದರು. ಆ ಬರವಣಿಗೆಗೂ ಅವರು ಮುಂಚೆ ಬರೆಯುತ್ತಿದ್ದ ಬರಹಗಳಿಗೂ ಒಂದು ವ್ಯತ್ಯಾಸ ಯಾಕೆ ಬಂತು?